# ಪೊಲೀಸ್ ಆಯುಕ್ತರು, ಮಂಗಳೂರು ನಗರ ರವರ ನಡವಳಿಗಳು

ವಿಷಯ : ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಟಿ.ಎಂ.ಎ ಪೈ ಹಾಲ್‌ನಿಂದ ಕೊಡಿಯಾಲ್‌ಗುತ್ತು ಮುಖ್ಯ ರಸ್ತೆವರೆಗೆ ಒಳಚರಂಡಿ ಕೊಳವೆಯನ್ನು ಅಳವಡಿಸುವ ಕಾಮಗಾರಿ ನಡೆಯುವ ಸಮಯ ವಾಹನ ಸಂಚಾರವನ್ನು ನಿಷೇಧಿಸಿ ತಾತ್ಕಾಲಿಕ ಅಧಿಸೂಚನೆ ಹೊರಡಿಸುವ ಕುರಿತು.

ಉಲ್ಲೇಖ: 1) Karnataka Urban Infrastructure Development & Finance Corporation Ltd ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ No: KIUWMIP/PIU-MNG/02MNG03/CR-20/2017-18/1449, DATE: 10.03.2022.

2) ಸಹಾಯಕ ಪೊಲೀಸ್ ಆಯುಕ್ತರು, ಮಂಗಳೂರು ಸಂಚಾರ ಉಪವಿಭಾಗ, ಮಂಗಳೂರು ನಗರರವರ ವರದಿ ಸಂಖ್ಯೆ : 14/ಸಿಸಿಆರ್/ಎಸಿಪಿ ಸಂಚಾರ/2022 ದಿನಾಂಕ : 23-03-2022.

**********

ಪ್ರಸ್ತಾವನೆ:

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಟಿ.ಎಂ.ಎ ಪೈ ಹಾಲ್‌ನಿಂದ ಕೊಡಿಯಾಲ್‌ಗುತ್ತು ಮುಖ್ಯ ರಸ್ತೆವರೆಗೆ ಒಳಚರಂಡಿ ಕೊಳವೆಯನ್ನು ಅಳವಡಿಸುವ ಕಾಮಗಾರಿ ಕೈಗೊಳ್ಳುವ ವೇಳೆ ವಾಹನ ಸಂಚಾರ ನಿಷೇಧಿಸಿ ಬದಲಿ ಮಾರ್ಗದಲ್ಲಿ ಸಂಚಾರ ಮಾರ್ಪಾಡು ಮಾಡುವಂತೆ ಉಲ್ಲೇಖಿತ (1) ರಲ್ಲಿ ಕಾರ್ಯಪಾಲಕ ಅಭಿಯಂತರರು, Karnataka Urban Infrastructure Development & Finance Corporation Ltd ರವರು ಕೋರಿಕೊಂಡಿರುತ್ತಾರೆ.

KUIDFCL ರವರ ಕೋರಿಕೆಯಂತೆ ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪವಿಭಾಗ, ಮಂಗಳೂರು ನಗರ ರವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಲಾಗಿದೆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಟಿ.ಎಂ.ಎ ಪೈ ಹಾಲ್‌ನಿಂದ ಕೊಡಿಯಾಲ್‌ಗುತ್ತು ಮುಖ್ಯ ರಸ್ತೆವರೆಗೆ ಒಳಚರಂಡಿ ಕೊಳವೆಯನ್ನು ಅಳವಡಿಸುವ ಕಾಮಗಾರಿ ಕೈಗೊಳ್ಳಲಾಗುವುದರಿಂದ ಸದ್ರಿ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧದ ಆದೇಶ ಹೊರಡಿಸುವುದರ ಜೊತೆಯಲ್ಲಿ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನಗಳ ಸುಗಮ ಸಂಚಾರಕ್ಕಾಗಿ ಬದಲಿ ಮಾರ್ಗದ ವ್ಯವಸ್ಥೆ ಮಾಡಬೇಕಾದ ಅವಶ್ಯಕತೆ ಇರುವುದಾಗಿ ಹಾಗೂ ಈ ಕೆಳಕಂಡ ಷರತ್ತುಗಳ ಅನ್ವಯ ಆದೇಶಿಸುವಂತೆ ಕೋರಿರುತ್ತಾರೆ.

ಷರತ್ತುಗಳು:

1. ಕಾಮಗಾರಿ ಪ್ರಾರಂಭ ಮತ್ತು ಮುಗಿಸುವ ದಿನಾಂಕ, ಕಾಮಗಾರಿ ನಡೆಸುವ ಉಸ್ತುವಾರಿ ಇಂಜಿನಿಯರ್ ಹಾಗೂ ಕಂಟ್ರಾಕ್ಟರ್ ರವರ ಹೆಸರು ಮತ್ತು ಮೊಬೈಲ್ ದೂರವಾಣಿ ಸಂಖ್ಯೆ ಇರುವ ಫಲಕವನ್ನು ಕಾಮಗಾರಿ ನಡೆಯುವ ಸ್ಥಳದಲ್ಲಿ ಅಳವಡಿಸುವುದು.
2. ಕಾಮಗಾರಿ ನಡೆಯುವ ಸ್ಥಳದಲ್ಲಿ ಬ್ಯಾರಿಕೇಡ್/ಡೈವರ್ಶನ್ ಬೋರ್ಡ್ ಗಳನ್ನು ಅಳವಡಿಸುವುದು.
3. ಕಾಮಗಾರಿ ನಡೆಯುವ ಸ್ಥಳದಲ್ಲಿ ಬೆಳಕಿನ ವ್ಯವಸ್ಥೆ ಮಾಡುವುದು.
4. ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯಗಳು ನಿರ್ದೇಶಿಸಿರುವ ರಸ್ತೆ ಕಾಮಗಾರಿ ವೇಳೆ ಕೈಗೊಳ್ಳಬೇಕಾಗಿರುವ ಎಲ್ಲಾ ಸುರಕ್ಷತಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು.

ಮೇಲ್ಕಂಡ ಪ್ರಸ್ತಾವನೆಯಲ್ಲಿ ಕಾಮಗಾರಿಯನ್ನು ನಡೆಸುವ ಸಮಯ ಈ ಮೇಲಿನ ಷರತ್ತುಗಳಿಗೆ ಒಳಪಟ್ಟು , ಒಳಚರಂಡಿ ಕಾಮಗಾರಿ ನಡೆಸುವ ಬಗ್ಗೆ ಎನ್ . ಶಶಿಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು ಹಾಗೂ ಅಪರ ದಂಡಾಧಿಕಾರಿಗಳು, ಮಂಗಳೂರು ನಗರ ಆದ ನಾನು ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ : 19 -04-2022 ರಿಂದ 02 -06-2022 ರವರೆಗೆ 45 ದಿನಗಳ ಕಾಲ ವಾಹನಗಳ ಸಂಚಾರದಲ್ಲಿ ಮಾರ್ಗ ಬದಲಾಯಿಸಿ ಈ ಕೆಳಕಂಡಂತೆ ತಾತ್ಕಾಲಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

## ಆದೇಶ

ಸಿಆರ್ ಎಂ-3/ 08/ ಅಧಿಸೂಚನೆ/ ಮಂ.ನ/ 2022 ದಿನಾಂಕ: 19 /04/2022

1. ಕಾಮಗಾರಿ ನಡೆಯುವ ವೇಳೆ ಕೊಡಿಯಾಲ್ ಗುತ್ತು ಮುಖ್ಯ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.
2. ಕಾಮಗಾರಿ ನಡೆಯುವ ವೇಳೆ ಬಿಜೈ ಜಂಕ್ಷನ್ ಕಡೆಯಿಂದ ಎಂ.ಜಿ ರಸ್ತೆಯನ್ನು ಪ್ರವೇಶಿಸುವ ಎಲ್ಲಾ ವಾಹನಗಳು ಬಿಜೈ ಜಂಕ್ಷನ್ ನಿಂದ ನೇರವಾಗಿ ಕರಂಗಲ್ಪಾಡಿ ಜಂಕ್ಷನ್ ಕಡೆಗೆ ಚಲಿಸಿ ನಂತರ ಬಲಕ್ಕೆ ತಿರುಗಿ ಪಿವಿಎಸ್ ಜಂಕ್ಷನ್ ಮೂಲಕ ಎಂ.ಜಿ ರಸ್ತೆ ಪ್ರವೇಶಿಸುವುದು.
3. ಕಾಮಗಾರಿ ನಡೆಯುವ ವೇಳೆ ಕರಂಗಲ್ಪಾಡಿ ಕಡೆಯಿಂದ ಬಂದು ಕೊಡಿಯಾಲ್ ಗುತ್ತು ಮುಖ್ಯ ರಸ್ತೆ ಮೂಲಕ ಎಂ.ಜಿ ರಸ್ತೆಯನ್ನು ಪ್ರವೇಶಿಸುವ ಎಲ್ಲಾ ವಾಹನಗಳು ಕರಂಗಲ್ಪಾಡಿ ಜಂಕ್ಷನ್ ನಿಂದ ನೇರವಾಗಿ ಬಿಜೈ ಜಂಕ್ಷನ್ ಕಡೆಗೆ ಚಲಿಸಿ ನಂತರ ಎಡಕ್ಕೆ ತಿರುಗಿ ಲಾಲ್ ಬಾಗ್ ಜಂಕ್ಷನ್ ಮೂಲಕ ಎಂ.ಜಿ ರಸ್ತೆ ಪ್ರವೇಶಿಸುವುದು.
4. ಕಾಮಗಾರಿ ನಡೆಯುವ ವೇಳೆ ಎಂ.ಜಿ ರಸ್ತೆಯಿಂದ ಕೊಡಿಯಾಲ್ ಗುತ್ತು ಮುಖ್ಯ ರಸ್ತೆಯ ಮೂಲಕ ಕರಂಗಲ್ಪಾಡಿ ಜಂಕ್ಷನ್ ಕಡೆಗೆ ಹೋಗುವ ಎಲ್ಲಾ ವಾಹನಗಳು ಎಂ.ಜಿ ರಸ್ತೆಯಲ್ಲಿ ನೇರವಾಗಿ ಚಲಿಸಿ ಪಿವಿಎಸ್ ಜಂಕ್ಷನ್ ನಲ್ಲಿ ಎಡಕ್ಕೆ ತಿರುಗಿ ಕರಂಗಲ್ಪಾಡಿ ಕಡೆಗೆ ಹೋಗುವುದು.
5. ಕಾಮಗಾರಿ ನಡೆಯುವ ವೇಳೆ ಎಂ.ಜಿ ರಸ್ತೆಯಿಂದ ಕೊಡಿಯಾಲ್ ಗುತ್ತು ಮುಖ್ಯ ರಸ್ತೆ ಮೂಲಕ ಬಿಜೈ ಜಂಕ್ಷನ್ ಕಡೆಗೆ ಹೋಗುವ ಎಲ್ಲಾ ವಾಹನಗಳು ಎಂ.ಜಿ ರಸ್ತೆಯಲ್ಲಿ ನೇರವಾಗಿ ಲಾಲ್ ಬಾಗ್ ಜಂಕ್ಷನ್ ಹೋಗಿ ಅಲ್ಲಿಂದ ಬಲಕ್ಕೆ ತಿರುಗಿ ಬಿಜೈ ಜಂಕ್ಷನ್ ಕಡೆಗೆ ಹೋಗುವುದು.

ಈ ಅಧಿಸೂಚನೆಯು ದಿನಾಂಕ: 19 -04-2022 ರಿಂದ ದಿನಾಂಕ: 02 -06-2022 ರವರೆಗೆ ಊರ್ಜಿತದಲ್ಲಿರುತ್ತದೆ.

ಈ ಆದೇಶದನ್ವಯ ಸದ್ರಿ ರಸ್ತೆಯಲ್ಲಿ ಅವಶ್ಯವುಳ್ಳ ಸೂಚನಾ ಫಲಕಗಳನ್ನು KUIDFCL ವತಿಯಿಂದ ಅಳವಡಿಸುವುದು ಹಾಗೂ ಸುಗಮ ಸಂಚಾರ ನಿಯಂತ್ರಣಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಿ ಈ ಆದೇಶ ಅನುಷ್ಠಾನಗೊಳಿಸಲು ಸಹಾಯಕ ಪೊಲೀಸ್ ಆಯುಕ್ತರು, ಮಂಗಳೂರು ಸಂಚಾರ ಉಪ ವಿಭಾಗ, ಮಂಗಳೂರು ನಗರ ರವರು ಅಧಿಕಾರವುಳ್ಳವರಾಗಿರುತ್ತಾರೆ.

ಈ ಆದೇಶವನ್ನು ದಿನಾಂಕ: 19 -04-2022 ರಂದು ನನ್ನ ಸ್ವ ಹಸ್ತ ಸಹಿ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

Digitally Signed by
Shashikumar N
Date: 19-04-2022 12:18:23
Reason: Approved

(ಎನ್. ಶಶಿಕುಮಾರ್, ಐ.ಪಿ.ಎಸ್.,)

ಪೊಲೀಸು ಆಯುಕ್ತರು ಹಾಗೂ ಅಪರ ದಂಡಾಧಿಕಾರಿಗಳು

ಮಂಗಳೂರು ನಗರ, ಮಂಗಳೂರು

ಪೊಲೀಸು ಆಯುಕ್ತರು
ಮಂಗಳೂರು ನಗರ, ಮಂಗಳೂರು

ಇವರಿಗೆ:

1. ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಮಾಹಿತಿಗಾಗಿ.

2. ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ. ಮಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಅಭಿಯಂತರರು, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು
4. ಕಾರ್ಯಪಾಲಕ ಅಭಿಯಂತರರು, Karnataka Urban Infrastructure Development & Finance Corporation Ltd ರವರಿಗೆ ಸೂಕ್ತ ಕ್ರಮಕ್ಕಾಗಿ
5. ಸಹಾಯಕ ಕಮೀಷನರ್, ಮಂಗಳೂರು.
6. ತಹಶೀಲ್ದಾರ್, ಮಂಗಳೂರು ಇವರಿಗೆ ಮಾಹಿತಿಗಾಗಿ.
7. ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ದ.ಕ. ಮಂಗಳೂರು ಇವರಿಗೆ ಈ ಅಧಿಸೂಚನೆಯನ್ನು ಜಿಲ್ಲೆಯ ವಾರ್ತಾ ಮಾಧ್ಯಮಗಳಲ್ಲಿ ವಾರ್ತಾ ರೂಪದಲ್ಲಿ ಉಚಿತವಾಗಿ ಪ್ರಚಾರ ಪಡಿಸಲು ಕೋರಿದೆ.
9. ವಿಭಾಗೀಯ ನಿಯಂತ್ರಣಾಧಿಕಾರಿ, ಕೆ.ಎಸ್. ಆರ್. ಟಿ .ಸಿ ಮಂಗಳೂರು.
10. ಪೊಲೀಸ್ ಅಧೀಕ್ಷಕರು ,ದ.ಕ ಜಿಲ್ಲೆ ಮಂಗಳೂರು
11. ಉಪ ಪೊಲೀಸು ಆಯುಕ್ತರು (ಅಪರಾಧ ಮತ್ತು ಸಂಚಾರ) ಮಂಗಳೂರು ನಗರ.
12. ಉಪ ಪೊಲೀಸು ಆಯುಕ್ತರು (ಕಾ ಮತ್ತು ಸು) ಮಂಗಳೂರು ನಗರ.
13. ಉಪ ಪೊಲೀಸು ಆಯುಕ್ತರು ಸಿ.ಎ.ಆರ್, ಮಂಗಳೂರು ನಗರ.
14. ಸಹಾಯಕ ಪೊಲೀಸ್ ಆಯುಕ್ತರು, ಮಂಗಳೂರು ಸಂಚಾರ ಉಪ ವಿಭಾಗ ಇವರಿಗೆ
15. ಪೊಲೀಸ್ ನಿರೀಕ್ಷಕರು, ಸಂಚಾರ ಪಶ್ಚಿಮ, ಪೊಲೀಸ್ ಠಾಣೆ, ಮಂಗಳೂರು ನಗರ
16. ಅಡ್ಮಿನ್, ಕಂಪ್ಯೂಟರ್ ವಿಭಾಗ, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ
17. ಪೊಲೀಸ್ ನಿರೀಕ್ಷಕರು, ನಿಸ್ತಂತು ಕೊಠಡಿ, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ
18. ವಿಷಯ ನಿರ್ವಾಹಕರು, GNL-1, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ